

# ಅಲ್ಪೊನಾ ರಂಗೋಲಿ!







ನವರಾತ್ರಿಯಲ್ಲಿ 'ಸಿಟಿ ಆಫ್ ಜಾಯ್' ಎಂದೇ ಪ್ರಖ್ಯಾತಿ ಪಡೆದಿರುವ ಕೋಲ್ಕತ್ತಾ ಪಟ್ಟಣ ಅಭೂತಪೂರ್ವ ರೀತಿಯಲ್ಲಿ ಸಿಂಗರಿಸಲ್ಪಡುತ್ತದೆ. ದುರ್ಗಾಪೂಜೆಯೆಂದೇ ಪ್ರಖ್ಯಾತಿ ಪಡೆದಿರುವ ದಶದಿನಗಳ ದಸರಾ ಪರ್ವಕಾಲದಲ್ಲಿ ಅಲ್ಲಿ ಕಚೇರಿ, ಶಾಲಾ ಕಾಲೇಜುಗಳಿಗೆಲ್ಲಾ ರಜೆ ಸಾರಲಾಗುತ್ತದೆ. ಇತರ ಎಲ್ಲಾ ಕಾರ್ಯ ಕಲಾಪಗಳನ್ನು ಮರೆತು ಊರಿಗೆ ಊರೇ ದುರ್ಗಾ ಪೂಜೆಯ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತದೆ!

ಈ ವರ್ಷವೂ ನವರಾತ್ರಿ ಆರಂಭವಾಗುವ ಒಂದು ದಿನ ಮೊದಲೇ ಮಹಾಲಯ ಅಮಾವಾಸ್ಯೆಯ ಮುಂಜಾವು ಕೋಲ್ಕತಾ ನಗರವು ವರ್ಣಮಯ ಅಚ್ಚರಿಯೊಂದಿಗೆ ಎಚ್ಚೆತ್ತುಕೊಂಡಿತು. ಅಂದು 'ಅಲ್ಪೊನಾ' ಎಂದು ಕರೆಯಲ್ಪಡುವ ಅತ್ಯಂತ ಉದ್ದದ ರಂಗೋಲಿ. ಇದನ್ನು ಲೇಕ್ ವ್ಯೂ ರಸ್ತೆಯುದ್ದಕ್ಕೂ ಬಿಡಿಸುವುದರೊಂದಿಗೆ ಹಬ್ಬದ ವಾತಾವರಣ ಸೃಷ್ಟಿಸಿತು.

ಸುಮಾರು 300 ಯುವ ಕಲಾವಿದರು ಒಗ್ಗೂಡಿ ಒಂದೂವರೆ ಕಿ.ಮೀ. ಉದ್ದದ ಈ ರಂಗೋಲಿ ಕಲೆಯನ್ನು ಸೃಷ್ಟಿಸಿ ನಗರದ ಈವರೆಗಿನ ಅತ್ಯಂತ ಉದ್ದದ ಸೃಜನಾತ್ಮಕ ರಂಗೋಲಿ ಎಂಬ ಹೆಗ್ಗಳಿಕೆ ಗಳಿಸಿದ್ದರು. ಈ ಮ್ಯಾರಥಾನ್ ರಂಗೋಲಿ ಸಂಪೂರ್ಣ ರಸ್ತೆಯ ಉದ್ದಗಲ ಆವರಿಸಿಕೊಂಡಿದ್ದು ಈ ಸಲದ ದುರ್ಗಾಪೂಜೆಗೆ ವಿಭಿನ್ನ ಮೆರಗು ನೀಡಿತ್ತು.

ಅಲ್ಪೊನಾ ರಂಗೋಲಿ ಕಲೆಯು ಪಶ್ಚಿಮ ಬಂಗಾಳ ರಾಜ್ಯಕ್ಕೆ ಮಾತ್ರ ಸೀಮಿತವಾಗಿರದೆ ಬಾಂಗ್ಲಾ ದೇಶದಲ್ಲೂ ಜನಪ್ರಿಯತೆ ಪಡೆದು ಪ್ರಚಲಿತವಿದೆ. ದಶಕದ ಹಿಂದೆಯೇ ಅಲ್ಲಿನ ಇನ್ಸ್ಟಿಟ್ಯೂಟ್ ಆಫ್ ಫೈನ್ ಆರ್ಟ್ಸ್ ಕಾಲೇಜಿನ ವಿದ್ಯಾರ್ಥಿಗಳು ಇಂತಹ ಸಾಧನೆ ಮಾಡಿದ್ದರು!

■ ರಮಣ್ ಶೆಟ್ಟಿ ರೆಂಜಾಳ್